## ದಿನಾಂಕ: 17.12.2019ರಂದು ಶ್ರೀರಂಗಪಟ್ಟಣ ಉಪ-ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು

**ಹಾಜರಿದ್ದ ಅಧಿಕಾರಿ/ನೌಕರರು:**

1) ಶ್ರೀ ಶ್ರೀನಿವಾಸಮೂರ್ತಿ : ಅಧ್ಯಕ್ಷರು, ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ವೃತ್ತ
2) ಶ್ರೀ ಸೋಮರಾಜು : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಪಾಂಡವಪುರ ವಿಭಾಗ
3) ಶ್ರೀ ನಂದೀಶ್.ಎಂ.ಎಸ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ
4) ಶ್ರೀ ಪ್ರಕಾಶ್ : ಲೆಕ್ಕಾಧಿಕಾರಿ, ಪಾಂಡವಪುರ ವಿಭಾಗ
5) ಶ್ರೀ ಪ್ರದೀಪ್ : ಸಹಾಯಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ
6) ಶ್ರೀ ಜ್ಯೋತಿ ಎಲ್. : ಸಹಾಯಕ ಇಂಜಿನಿಯರ್(ತಾಂ), ಶ್ರೀರಂಗಪಟ್ಟಣ
7) ಶ್ರೀ ಕೇಶವಮೂರ್ತಿ : ಸಹಾಯಕ ಇಂಜಿನಿಯರ್(ವಿ), ಬೆಳಗೊಳ ಶಾಖೆ
8) ಶ್ರೀ ಮಂಜುನಾಥ : ಸಹಾಯಕ ಇಂಜಿನಿಯರ್(ವಿ), ಅರಕೆರೆ ಶಾಖೆ
9) ಶ್ರೀ ಸುರೇಂದ್ರ ಮೋಹನ್ : ಕಿರಿಯ ಇಂಜಿನಿಯರ್(ವಿ), ಕೆ.ಶೆಟ್ಟಹಳ್ಳಿ ಶಾಖೆ
10) ಶ್ರೀ ಕೆ.ಆರ್. ರಾಜು : ಕಿರಿಯ ಇಂಜಿನಿಯರ್(ವಿ), ಕೊಡಿಯಾಲ ಶಾಖೆ
11) ಶ್ರೀ ನವೀನ್‌ಕುಮಾರ್ : ಕಿರಿಯ ಇಂಜಿನಿಯರ್(ವಿ), ನಗುವನಹಳ್ಳಿ ಶಾಖೆ
12) ಶ್ರೀ ಕುಮಾರ್ : ಪ್ರಭಾರ ಹಿರಿಯ ಸಹಾಯಕ, ಪಟ್ಟಣ ವಿಭಾಗ
13) ಶ್ರೀ ಮಹೇಶ್ : ಪ್ರಭಾರ ಹಿರಿಯ ಸಹಾಯಕ, ಅರಕೆರೆ ಶಾಖೆ

ಜನಸಂಪರ್ಕ ಸಭೆಯ ಅಧ್ಯಕ್ಷರು ಮಧ್ಯಹ್ನ 2.30ರಲ್ಲಿ ಸಭೆಯನ್ನು ಪ್ರಾರಂಭಿಸಿ, ಸ್ವಾಗತ ಭಾಷಣವನ್ನು ಮಾಡುವ ಮೂಲಕ ಸಭೆಗೆ ಹಾಜರಾಗಿದ್ದ ಅಧಿಕಾರಿ/ನೌಕರ ವರ್ಗದವರಿಗೆ, ಹಾಗೂ ಗ್ರಾಹಕರಿಗೆ ಸ್ವಾಗತ ಕೋರುತ್ತಾ, ಶ್ರೀರಂಗಪಟ್ಟಣ ತಾಲ್ಲೋಕು ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ದೂರು ಮತ್ತು ಸಲಹೆಗಳನ್ನು ಮುಕ್ತವಾಗಿ ಚರ್ಚಿಸಲು ಕೋರಿದರು. ನಂತರ ಸಭೆಯಲ್ಲಿ ನೊಂದಾಯಿಸಲ್ಪಟ್ಟ ದೂರು ಮತ್ತು ದೂರಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

| | ದೂರು | ಕ್ರಮ |
|---|---|---|
| 1) | **ಶ್ರೀ ಮುದ್ದಲಿಂಗೇಗೌಡ, ಗಣಗೂರು ಮೊಬೈಲ್ ಸಂಖ್ಯೆ: 9880996328** | |
| | 63 ಕೆ.ವಿ.ಎ ಪರಿವರ್ತಕದಲ್ಲಿ ಅಧಿಕ ಒತ್ತಡವಾಗಿದ್ದು, low voltage ಆಗಿರುತ್ತದೆ. ಆದ್ದರಿಂದ 100 ಕೆವಿಎ ಪರಿವರ್ತಕಕ್ಕೆ ಬದಲಾಯಿಸುವುದು ಅಥವಾ 25 ಕೆವಿಎ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಬೇಕೆಂದು ಕೋರಿರುತ್ತಾರೆ. | ಮಾನ್ಯ ಅ.ಇಂ(ವಿ) ಮಂಡ್ಯ ವೃತ್ತರವರು ಶಾಖಾಧಿಕಾರಿಗೆ ಶಿಘ್ರವಾಗಿ ಹೆಚ್ಚುವರಿಯಾಗಿ 25 ಕೆವಿಎ ಪರಿವರ್ತಕಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ಅಳವಡಿಸಲು ತಿಳಿಸಿರುತ್ತಾರೆ |
| 1) | **ಶ್ರೀ ಕೃಷ್ಣ, ಶ್ರೀರಂಗಪಟ್ಟಣ ಮೊಬೈಲ್ ಸಂಖ್ಯೆ: 9845034509** | |
| | ಕಾವೇರಿ ಬಡಾವಣೆಯಲ್ಲಿನ ಮನೆಗೆ ವಿದ್ಯುತ್ ಸಂಪರ್ಕ ಪಡೆದಿದ್ದು, ನಮಗೆ ಒಂದು ಕಂಬವನ್ನು ಅಳವಡಿಸಿಕೊಡಬೇಕೆಂದು ಕೋರಿರುತ್ತಾರೆ. | ಮಾನ್ಯ ಅ.ಇಂ(ವಿ) ಮಂಡ್ಯ ವೃತ್ತರವರು ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ. |
| 1) | **ಶ್ರೀ ವೆಂಕಟೇಶ್, ಪಾಲಹಳ್ಳಿ ಮೊಬೈಲ್ ಸಂಖ್ಯೆ: 9538647558** | |
| | ಎಫ್-2 ಇಂಡಸ್ಟ್ರಿಯಲ್ ಫೀಡರ್ ಪದೇ ಪದೇ ಟ್ರಿಪ್ ಆಗುತ್ತದೆ, ಎಂದು ತಿಳಿಸಿರುತ್ತಾರೆ. ಮತ್ತು ಜನ ಸಂಪರ್ಕ ಸಭೆಯ ಮಾಹಿತಿಯನ್ನು ಹೆಚ್ಚು ಪ್ರಚಾರ ಪಡಿಸಲು ಕೋರಿರುತ್ತಾರೆ. | ಮಾನ್ಯ ಅ.ಇಂ(ವಿ) ಮಂಡ್ಯ ವೃತ್ತರವರು ಪ್ರತಿ ಸೋಮವಾರ ಎಫ್-2 ಇಂಡಸ್ಟ್ರಿಯಲ್ ಫೀಡರಿನ ಜಂಗಲ್ ಕ್ಲಿಯರ್ ಮಾಡಿಸುವಂತೆ ತಿಳಿಸಿದ್ದು, ಅದರ ವರದಿಯನ್ನು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಗೆ ಸಲ್ಲಿಸುವಂತೆ ತಿಳಿಸಿರುತ್ತಾರೆ ಮತ್ತು ಮುಂದಿನ ಜನ ಸಂಪರ್ಕ ಸಭೆಗೆ ಹೆಚ್ಚು ಪ್ರಚಾರ ನೀಡಲು ಕ್ರಮವಹಿಸುವುದು, ಹಾಗೂ ಸಭೆಗೆ ಸಂಬಂಧಿಸಿದಂತೆ ಆಯಾ ಗ್ರಾಮ ಪಂಚಾಯತಿಗಳಲ್ಲಿ ಮಾಹಿತಿ ಲಭ್ಯವಿರುವಂತೆ ಕ್ರಮವಹಿಸಬೇಕೆಂದು ತಿಳಿಸಿರುತ್ತಾರೆ. |
| 1) | **ಶ್ರೀ ಸ್ವಾಮಿ, ಹೊಸಆಂದೂರು ಮೊಬೈಲ್ ಸಂಖ್ಯೆ: 9916281333** | |
| | ನನ್ನ ಖಾಸಗಿ ಸ್ವತ್ತು ಅಂದರೆ ರೆವಿನ್ಯೂ ಜಾಗದಲ್ಲಿ ಕಂಬ ಹಾಕಿದ್ದು, ಸ್ಥಳಾಂತರಿಸಬೇಕೆಂದು ಕೇಳಿರುತ್ತಾರೆ. | ಮಾನ್ಯ ಅ.ಇಂ(ವಿ) ಮಂಡ್ಯ ವೃತ್ತರವರು ಸ್ಥಳಪರಿಶೀಲಿಸಿ ಸ್ವಯಂ ಕಾರ್ಯ ಯೋಜನೆಯಡಿಯಲ್ಲಿ ಅಂದಾಜುಪಟ್ಟಿ ತಯಾರಿಸುವಂತೆ ತಿಳಿಸಿರುತ್ತಾರೆ. |

ಸಭೆಯನ್ನು 5:00ಕ್ಕೆ ಮುಕ್ತಾಯಗೊಳಿಸುತ್ತಾ, ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪ-ವಿಭಾಗಾಧಿಕಾರಿಯವರಿಗೆ ಸೂಚಿಸಲಾಯಿತು.

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಶ್ರೀರಂಪ/2019-20/ 1818-23 ದಿನಾಂಕ: 19/12/2019

**ಪ್ರತಿಗಳನ್ನು ಇವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.**

1) ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾವಿಸನಿನಿ, ಮೈಸೂರು.
2) ಪ್ರಧಾನ ವ್ಯವಸ್ಥಾಪಕರು(ತಾಂ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.
3) ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ನಿಗಮ ಕಾರ್ಯಾಲಯ, ಚಾವಿಸನಿನಿ, ಮಂಡ್ಯ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ, ಪಾಂಡವಪುರ.
4) ಕಛೇರಿ ಪ್ರತಿ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಚಾವಿಸನಿನಿ, ಶ್ರೀರಂಗಪಟ್ಟಣ.